ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಋಣಮುಕ್ತಳು' (1984) ಚಿತ್ರದ ಮುಹೂರ್ತ ಸಂದರ್ಭ. ಲೇಖಕಿ ಅನುಪಮಾ ನಿರಂಜನ ಅವರೊಂದಿಗೆ ನಟಿಯರಾದ ಪದ್ಮಾ ವಾಸಂತಿ, ಭಾರತಿ, ಜಯಮಾಲಾ



ಈ ಪೋರ್ಟಲ್‌ನ ವಿಭಾಗಗಳೇ ಅದರ ಹೂರಣದ ವೈಶಿಷ್ಟ್ಯವನ್ನೂ ಹೇಳುವಂತಿವೆ. 'ನಾಸ್ಟಾಲ್ಜಿಯಾ', 'ಚಿತ್ರಕಥೆ', 'ಶೂಟಿಂಗ್ ಸೋಜಿಗ', 'ಮಾಹಿತಿ – ವಿಶೇಷ', 'ನೆನಪು', 'ಪೋಸ್ಟರ್ ಮಾಹಿತಿ', 'ಅತಿಥಿ ಅಕ್ಷರ' ಇವು ಈ ಜಾಲತಾಣದ ವಿಭಾಗಗಳ ಹೆಸರುಗಳು. ಇದು ಬರೀ ಅಕಾಡೆಮಿಕ್ ವಲಯಕ್ಕಷ್ಟೇ ಸೀಮಿತಗೊಳ್ಳದೆ ಸಿನಿಮಾ ಪ್ರೀತಿಸುವ ಎಲ್ಲ ಜನರೊಂದಿಗೂ ಸಂವಾದಿಸುವ ಹಾಗಿರಬೇಕು ಎಂಬ ಎಚ್ಚರ ಶಶಿಧರ ಅವರಿಗಿದೆ.

ಈ ಜಾಲತಾಣದ್ದೇ ಒಂದು ಯೂಟ್ಯೂಬ್ ಚಾನಲ್ ಕೂಡ ಇರಲಿದೆ. ಜಾಲತಾಣದಲ್ಲಿನ ಫೋಟೊಗಳ ಹಿಂದಿನ ಕತೆ, ಆಗಿನ ಸಂದರ್ಭ, ಅನುಭವಗಳನ್ನು ಛಾಯಾಗ್ರಾಹಕರೇ ಯೂಟ್ಯೂಬ್ ಚಾನಲ್‌ನಲ್ಲಿ ಹಂಚಿಕೊಳ್ಳಲಿದ್ದಾರೆ. ಕನ್ನಡ ಚಿತ್ರರಂಗದ ಹಿರಿಯ ಸಿನಿಮಾ ಸ್ಥಿರಚಿತ್ರ ಛಾಯಾಗ್ರಾಹಕರಾದ ಭವಾನಿ ಲಕ್ಷ್ಮೀನಾರಾಯಣ ಮತ್ತು ಪ್ರಗತಿ ಅಶ್ವತ್ಥ ನಾರಾಯಣ ಅವರು ಸೆರೆಹಿಡಿದ ಫೋಟೊಗಳ ದೊಡ್ಡ ಭಂಡಾರವೇ ಪೋರ್ಟಲ್‌ನಲ್ಲಿ ಸಿಗಲಿವೆ.

ಮಾರ್ಚ್ 6ರಂದು ನಿರ್ದೇಶಕ ಗಿರೀಶ ಕಾಸರವಳ್ಳಿಯವರು 'ಚಿತ್ರಪಥ' ವೆಬ್ ಪೋರ್ಟಲ್ ಅನ್ನು ಅನಾವರಣಗೊಳಿಸಿದ್ದಾರೆ. chithrapatha.com ಎಂದು ಟೈಪ್ ಮಾಡುವುದರ ಮೂಲಕ ನೀವೂ ಚಿತ್ರಪಥದಲ್ಲಿ ನಡಿಗೆ ಮಾಡಬಹುದು. ಅಲ್ಲಿನ ಅಪರೂಪದ ಚಿತ್ರಗಳನ್ನು ಕಣ್ತುಂಬಿಕೊಂಡು, ಮಾಹಿತಿಗಳನ್ನು ಮನಸಲ್ಲಿ ತುಂಬಿಕೊಂಡು ಖುಷಿಪಡಬಹುದು. ■

# ಹರ್ಷಿತಾ ಹಾಡಿನ ಪಾಠ!



ಕಥೆ, ನಟನೆ ಹೇಗಿರುತ್ತದೋ ಗೊತ್ತಿಲ್ಲ, ಆದರೆ ಶೀರ್ಷಿಕೆ ಮಾತ್ರ ವಿಚಿತ್ರವಾಗಿರುವ ಸಿನಿಮಾಗಳ ದೊಡ್ಡ ಪಟ್ಟಿಯೇ ಗಾಂಧಿನಗರದಲ್ಲಿದೆ. 'ಚಡ್ಡಿದೋಸ್ತ್ ಕಡ್ಡಿ ಅಲ್ಲಾಡುಸ್ಬುಟ್ಟ' ಕೂಡ ತನ್ನ ಶೀರ್ಷಿಕೆಯ ಕಾರಣಕ್ಕೇ ಒಮ್ಮೆ ಕಿಸಕ್‌ನೆ ನಗುವುಕ್ಕಿಸುವ ಸಿನಿಮಾ. ಆಸ್ಕರ್ ಕೃಷ್ಣ ತೆರೆಯ ಮೇಲೆ ನಾಯಕನಾಗಿಯೂ, ತೆರೆಯ ಹಿಂದೆ ನಿರ್ದೇಶಕನಾಗಿಯೂ ಕೆಲಸ ಮಾಡಿರುವ ಸಿನಿಮಾ ಇದು.

ಇನ್ನೇನು ಚಿತ್ರ ಚಿತ್ರಮಂದಿರದಲ್ಲಿ ಕಡ್ಡಿ ಅಲ್ಲಾಡಿಸಲು ಸಜ್ಜಾಗಿದೆ. ಚಿತ್ರಮಂದಿರಕ್ಕೆ ಚಡ್ಡಿದೋಸ್ತುಗಳ ಜೊತೆಗೆ ಪಡ್ಡೆದೋಸ್ತುಗಳನ್ನೂ ಆಕರ್ಷಿಸುವ ಪ್ರಯತ್ನದಲ್ಲಿ ಕೃಷ್ಣ ಇರುವಂತೆ ತೋರುತ್ತದೆ. ಹಾಗಾಗಿಯೇ ಚಿತ್ರದ ಹಾಡೊಂದರ ಸ್ಥಿರಚಿತ್ರವನ್ನು ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ.

'ಮನುಷ್ಯನಾಗಿ ಹುಟ್ಟಿದ್ಮೇಲೆ ಏನ್ ಮಾಡ್ಬೇಕು' ಎಂದು ಶುರುವಾಗುವ ಈ ಹಾಡಿನಲ್ಲಿ ಮಾಡಬಾರದ ಕೆಲಸವನ್ನು ಮಾಡಲು ಪ್ರೇರಣೆ ಕೊಡುವ ಹಾಗೆ ಹರ್ಷಿತಾ ಕಲ್ಲಿಂಗಲ್ ಬಾಗಿ ಬಳುಕಿ ಪಾಠ ಮಾಡಿದ್ದಾರಂತೆ. ಈಗಾಗಲೇ ಮಲಯಾಳಂ, ತೆಲುಗು, ತಮಿಳು ಸಿನಿಮಾಗಳಲ್ಲಿ ನಟಿಸಿರುವ ಹರ್ಷಿತಾ, ಈ ಚಿತ್ರದ ವಿಶೇಷ ಹಾಡಿನ ಮೂಲಕ ಚಂದನವನದಲ್ಲಿಯೂ ತಮ್ಮ ಮಾದಕತೆಯ ಸಿಹಿ ಹಂಚುವ ಉಮೇದಿನಲ್ಲಿದ್ದಾರೆ. ಅಂದಹಾಗೆ ಹರ್ಷಿತಾ ಕನ್ನಡದವರೇ. ಸುತ್ತಲಿನ ಚಿತ್ರರಂಗಗಳನ್ನೆಲ್ಲ ಸುತ್ತಾಡಿಕೊಂಡು ಕನ್ನಡಕ್ಕೆ ಬಂದಿರುವ ಈ ಹುಡುಗಿ, ಈ ಹಾಡಿನ ಮೂಲಕ ಗಾಂಧಿನಗರದ ದೃಷ್ಟಿ ತನ್ನ ಮೇಲೆಬಿದ್ದು ಇನ್ನಷ್ಟು ಅವಕಾಶಗಳು ಅರಸಿಕೊಂಡು ಬರಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ■

# ಮೇಘ ಬಂತು ಮೇಘಾ



ಜೀ ಕನ್ನಡ ವಾಹಿನಿಯ 'ಜೊತೆ ಜೊತೆಯಲಿ' ಧಾರಾವಾಹಿಯ ಪಾತ್ರದ ಮೂಲಕ ಜನಪ್ರಿಯತೆ ಗಳಿಸಿದ ಮೇಘಾ ಶೆಟ್ಟಿ ಈಗ ಚಂದನವನದಲ್ಲಿಯೂ ಮಿಂಚಲು ಸಜ್ಜಾಗಿರುವುದು ಗೊತ್ತೇ ಇದೆ. ಗಣೇಶ್ ಅಭಿನಯದ 'ತ್ರಿಬಲ್ ರೈಡಿಂಗ್' ಸಿನಿಮಾದಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ನಡುವೆಯೇ ಅವರು ಚಂದನ್ ಶೆಟ್ಟಿ ಅವರ ಒಂದು ಆಲ್ಬಂ ಸಾಂಗ್‌ನಲ್ಲಿ ಮೈಚಳಿ ಬಿಟ್ಟು ನರ್ತಿಸಿದ್ದಾರೆ. ಧಾರಾವಾಹಿಯ ಸಾಂಪ್ರದಾಯಿಕ ಇಮೇಜ್‌ನ ಹಂಗು ತೊರೆದು ಸಖತ್ ಗ್ಲಾಮರಸ್ ಆಗಿ ಕಾಣಿಸಿಕೊಂಡಿರುವ ಈ ಹಾಡು ಇತ್ತೀಚೆಗಷ್ಟೇ ಬಿಡುಗಡೆಯಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಸದ್ದು ಮಾಡುತ್ತಿದೆ.

ಮೂರೂವರೆ ನಿಮಿಷದ 'ನೋಡು ಶಿವಾ' ಹಾಡಿಗೆ ಸಾಹಿತ್ಯ ಮತ್ತು ಸಂಗೀತ ನೀಡಿರುವುದು ಚಂದನ್. ಮೋನಿಕಾ ಕಲ್ಲೂರಿ ನಿರ್ಮಿಸಿರುವ ಈ ಹಾಡು ಆನಂದ್ ಆಡಿಯೊ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾಗಿದೆ. ■